

# ‘ಬೀಸ್ಟ್’ V/s ‘ಕೆಜಿಎಫ್2’ ನಡುವೆ ‘ಜೆರ್ಸಿ’

‘ಬೀಸ್ಟ್’ ತುಸು ಬೆಚ್ಚಿದೆ ಎನ್ನುವ ಮಾತಿದೆ. ‘ಕೆಜಿಎಫ್ 2’ ಸಿನಿಮಾದ ಹರಳುಗಟ್ಟಿದ ನಿರೀಕ್ಷೆಯೇ ಇದಕ್ಕೆ ಕಾರಣ ಎನ್ನುವುದು ಈ ಬೆಚ್ಚುವಿಕೆಗೆ ಕಾರಣ. ಹಾಗಂತ ನಿರ್ದೇಶಕ ನೆಲ್ಸನ್ ತಮ್ಮ ಪ್ರತಿಭೆಯನ್ನು ಸ್ಪರ್ಧೆಗೆ ಒಡ್ಡಿಕೊಳ್ಳಲು ಹಿಂದೇಟೇನೂ ಹಾಕುತ್ತಿಲ್ಲ. ಏಪ್ರಿಲ್ 14ಕ್ಕೆ ತೆರೆಕಾಣಿಸಬೇಕು ಎಂಬ ನಿರ್ಧಾರವನ್ನು ಒಂದು ದಿನ ಹಿಂದಕ್ಕೆ ಹಾಕಿ, 13ಕ್ಕೆ ಬಿಡುಗಡೆ ಮಾಡಲು ಯೋಚಿಸುತ್ತಿದ್ದಾರೆ. ‘ಕೆಜಿಎಫ್ 2’ ಕೂಡ ಏಪ್ರಿಲ್ 14ರಂದೇ ತೆರೆಕಾಣಲಿದೆ.

ಯಶ್ ಅಭಿನಯದ ‘ಕೆಜಿಎಫ್’ನ ಎರಡನೇ ಕಂತು ಮೊದಲದನೆಯದಕ್ಕಿಂತ ಹೆಚ್ಚು ಮಾರುಕಟ್ಟೆಯನ್ನು ವಿಸ್ತರಿಸಿಕೊಳ್ಳಲಿದೆ ಎಂಬುದು ಲೆಕ್ಕಾಚಾರ. ಪ್ಯಾನ್ ಇಂಡಿಯಾ ಸಿನಿಮಾ ಕೆಟಗರಿಗೆ ಇದನ್ನು ಸೇರಿಸಿದ್ದು, ಏಕಕಾಲಕ್ಕೆ ಹಲವು ಭಾಷೆಗಳಲ್ಲಿ (ಡಬ್ ಆಗಿ) ತೆರೆಗೆ ಬರಲಿದೆ. ‘ಬೀಸ್ಟ್’ ಕೂಡ ಅದೇ ಹಾದಿಯಲ್ಲಿದೆ. ತಲಪತಿ ವಿಜಯ್ ನಾಯಕರಾಗಿರುವುದರಿಂದ ಹಲವು ರಾಜ್ಯಗಳಲ್ಲಿ ಅವರ ಅಭಿಮಾನಿಗಳು ಸಿನಿಮಾಗೆ ಒಳ್ಳೆಯ ಓಪನಿಂಗ್ ದಕ್ಕಿಸಿಕೊಡುವ ನಿರೀಕ್ಷೆ ಇದೆ. ‘ಮಾಸ್ಟರ್’ ತಮಿಳು ಚಿತ್ರದ ಗೆಲುವು ಅವರ ಹುಮ್ಮಸ್ಸನ್ನು ಇನ್ನಷ್ಟು ಹೆಚ್ಚಿಸಿದೆ. ಅಲ್ಲದೆ ಅರೇಬಿಕ್ ಕುತ್ತು ಹಾಡು ಜನಮನ ಗೆದ್ದಿರುವುದು ಚಿತ್ರಕ್ಕೆ ಇಂಧನವಾಗಿ ಒದಗಿಬಂದಿದೆ. ವಿಜಯ್ ಅವರಿಗೆ ನಾಯಕಿಯಾಗಿ ಪೂಜಾ ಹೆಗ್ಡೆ ಇದ್ದಾರೆ.

ಇನ್ನೊಂದು ಕಡೆ ‘ಕೆಜಿಎಫ್ 2’ ಯಶ್ ಅವರ ತಾರಾ ವರ್ಚಸ್ಸನ್ನೇ ನೆಚ್ಚಿಕೊಂಡಿದೆ. ಇವೆರಡೂ ಚಿತ್ರಗಳು ತೆರೆಕಾಣಬೇಕು ಎಂದುಕೊಂಡಿರುವ ಏಪ್ರಿಲ್ 14ರಂದೇ ‘ಜೆರ್ಸಿ’ ಹಿಂದಿ ಚಿತ್ರವೂ ಬಿಡುಗಡೆಯಾಗಲಿದೆ. ಶಾಹಿದ್ ಕಪೂರ್ ನಾಯಕರಾಗಿರುವ ಇದು ಅದೇ ಹೆಸರಿನ ತೆಲುಗು ಸಿನಿಮಾದ ರೀಮೇಕ್. ಕಡಿಮೆ ಬಜೆಟ್‌ನ ಈ ಚಿತ್ರ ಎರಡು ‘ಪ್ಯಾನ್ ಇಂಡಿಯಾ ಪ್ರಾಡಕ್ಟ್’ಗಳಿಗೆ ಮುಖಾಮುಖಿಯಾಗಲಿದೆ.


ಒಂದು ದಿನ ಮುಂಚಿತವಾಗಿಯೇ ಬಿಡುಗಡೆಯಾಗಿ, ಹೆಚ್ಚು ತೆರೆಗಳನ್ನು ಆಕ್ರಮಿಸಿಕೊಂಡು, ಸುದೀರ್ಘಾವಧಿ ವಾರಾಂತ್ಯದಲ್ಲಿ ಉತ್ತಮ ಗಳಿಕೆ ಕಾಣಬಹುದೆನ್ನುವುದು ‘ಬೀಸ್ಟ್’ ತಮಿಳು ಚಿತ್ರತಂಡದ ಲೆಕ್ಕಾಚಾರ.





■ ವಿಶಾಖ ಎನ್.

# ಅಜಯ್ ಎದುರು ತಾನ್‌ಸೇನ್



ಭರತ್ ಭೂಷಣ್, ಮೀನಾಕುಮಾರಿ ಅಭಿನಯಿಸಿದ್ದ ‘ಬೈಜು ಬವ್ರಾ’ ಹಿಂದಿ ಸಿನಿಮಾ 1952ರಲ್ಲಿ ತೆರೆಕಂಡಿತ್ತು. ನೌಶಾದ್ ಸ್ವರ ಸಂಯೋಜನೆಯ ಹಾಡುಗಳು ಜನಮನ ಗೆದ್ದಿದ್ದವು. ಅಕ್ಬರನ ಆಸ್ಥಾನದ ಸಂಗೀತ ದಿಗ್ಗಜ ತಾನ್‌ಸೇನ್‌ಗೆ ಬೈಜು ಬವ್ರಾ ಸವಾಲೊಡ್ಡುವ ಕಥಾನಕದ ಚಿತ್ರ ಅದು. ನಿರ್ದೇಶಕ ಸಂಜಯ್ ಲೀಲಾ ಬನ್ಸಾಲಿ ಈಗ ಅದನ್ನೇ ಮರುಸೃಷ್ಟಿಸಲು ಹೊರಟಿದ್ದಾರೆ.

ಈ ಸಿನಿಮಾ ಬಗೆಗೆ ಅವರು ಯೋಚಿಸಲಾರಂಭಿಸಿ ವರ್ಷಕ್ಕೂ ಹೆಚ್ಚು ಸಮಯವಾಗಿದೆ. ರಣಬೀರ್ ಕಪೂರ್ ಹಾಗೂ ದೀಪಿಕಾ ಪಡುಕೋಣೆ ಇಬ್ಬರನ್ನೂ ಜೋಡಿಯಾಗಿಸಬೇಕೆಂದು ಮೊದಲು ಬನ್ಸಾಲಿ ನಿರ್ಧರಿಸಿದ್ದರು. ಆದರೆ ರಣಬೀರ್ ತಮಗೆ ಸಂಜಯ್ ಜತೆ ಕೆಲಸ ಮಾಡಲು ಇಷ್ಟವಿಲ್ಲ ಎಂದುಬಿಟ್ಟರು. ‘ಸಾವರಿಯಾ’ ಸಿನಿಮಾದಲ್ಲಿ ಇದೇ ನಿರ್ದೇಶಕರಿಂದ ಪದಾರ್ಪಣೆಗೊಂಡಿದ್ದ ರಣಬೀರ್‌ಗೆ ಮೊದಲಿನಿಂದಲೂ ಈ ನಿರ್ದೇಶಕರ ಕುರಿತು ತಕರಾರುಗಳಿವೆ. ‘ಬೈಜು ಬಾವ್ರಾ’ ಈ ಕಾಲದವರು ನೋಡುವ ಚಿತ್ರವಲ್ಲ ಎನ್ನುವುದೂ ಅವರ ಅಭಿಪ್ರಾಯ. ದೀಪಿಕಾ ಮೊದಲೇ ಒಪ್ಪಿಕೊಂಡಿರುವ ದೊಡ್ಡ ಚಿತ್ರಗಳ ಸಾಲೇ ಇರುವುದರಿಂದ ಅವರು ಕೂಡ ಈ ಚಿತ್ರದಲ್ಲಿ ನಟಿಸಲು ಒಪ್ಪಲಿಲ್ಲ. ಈಗ ರಣವೀರ್ ಹಾಗೂ ಆಲಿಯಾ ಭಟ್ ಮುಖ್ಯಪಾತ್ರಗಳಲ್ಲಿ ಅಭಿನಯಿಸುವುದು ಬಹುತೇಕ ನಿಕ್ಕಿಯಾಗಿದೆ.




ತಾನ್‌ಸೇನ್ ಪಾತ್ರಕ್ಕೆ ಅಜಯ್ ದೇವಗನ್ ಅವರನ್ನು ಒಪ್ಪಿಸಲು ಸಂಜಯ್ ಲೀಲಾ ಬನ್ಸಾಲಿ ಪ್ರಯತ್ನಿಸುತ್ತಿದ್ದಾರೆ. ಸಂಗೀತಗಾರನ ಪಾತ್ರಕ್ಕೆ ಆ್ಯಕ್ಷನ್ ಹೀರೊ ಹೇಗೆ ಒಪ್ಪುವರೋ ಎನ್ನುವುದು ಕುತೂಹಲ. 23 ವರ್ಷಗಳ ನಂತರ ಸಂಜಯ್ ನಿರ್ದೇಶನದ ಸಿನಿಮಾದ ಸಣ್ಣ ಪಾತ್ರದಲ್ಲಿಯೇ ನಟಿಸಲು ಅಜಯ್ ಒಪ್ಪಿದ ಉದಾಹರಣೆ ಎದುರಲ್ಲಿದೆ. ‘ಗಂಗೂಬಾಯಿ ಕಾಠಿಯಾವಾಡಿ’ ಚಿತ್ರದಲ್ಲಿ ಅವರು ಇಂತಹ ಅವಕಾಶಕ್ಕೆ ಒಲ್ಲೆ ಎನ್ನಲಿಲ್ಲ. ತಾನ್‌ಸೇನ್ ಪಾತ್ರಕ್ಕೂ ಅವರು ಜೀವ ತುಂಬಬಲ್ಲರು ಎನ್ನುವುದು ಸಂಜಯ್ ಲೀಲಾ ಬನ್ಸಾಲಿ ಅಭಿಪ್ರಾಯ. ‘ಗಂಗೂಬಾಯಿ ಕಾಠಿಯಾವಾಡಿ’ಯ ಯಶಸ್ಸಿನ ಅಲೆ ಮೇಲೆ ತೇಲುತ್ತಿರುವ ಸಂಜಯ್ ಬನ್ಸಾಲಿ ಆಹ್ವಾನಕ್ಕೆ ಅಜಯ್ ಒಪ್ಪುವರೇ ಎಂದು ನೋಡಬೇಕಿದೆ. ■